ಶಿಕ್ಷಣದ ಹಕ್ಕು

ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

ಸಂಖ್ಯೆ: spdssrma1/ಯು-ಡೈಸ್/2015 ದಿನಾಂಕ: 23-05-2016

**ಗೆ,**
**ಎಲ್ಲಾ ಜಿಲ್ಲೆಯ ಉಪನಿರ್ದೇಶಕರು(ಆಡಳಿತ)**

**ಸುತ್ತೋಲೆ**

**ವಿಷಯ:-** ಕರ್ನಾಟಕ ರಾಜ್ಯದಲ್ಲಿ ವಿದ್ಯಾರ್ಥಿಗಳ ದಾಖಲಾತಿ ಮಾಹಿತಿಯನ್ನು ಸಂಗ್ರಹಿಸುವ ಬಗ್ಗೆ.
**ಉಲ್ಲೇಖ:** -1. ಸರ್ಕಾರಿ ಅದೇಶ ಸಂಖ್ಯೆ ಇಡಿ 112 ಮಾಹಿತಿ 2015 ಬೆಂಗಳೂರು ದಿನಾಂಕ: 20-05-2015
2. ಮಾನ್ಯ ಪ್ರಧಾನ ಕಾರ್ಯದರ್ಶಿರವರು ದಿನಾಂಕ:- 21-05-2016 ರ ಸಭೆಯಲ್ಲಿ ಸೂಚಿಸಿದಂತೆ.

-^-^-^-^-^-^-^-

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ದಿನಾಂಕ: 21-05-2016 ರ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಮಾಹಿತಿ ಸಂಗ್ರಹಣಾ ವ್ಯವಸ್ಥೆಯನ್ನು ಆನ್ ಲೈನ್ ಮುಖಾಂತರ ವಿದ್ಯಾರ್ಥಿಗಳ ಸಮಗ್ರ ಮಾಹಿತಿಯನ್ನು ಸಂಗ್ರಹಿಸಲು ತೀರ್ಮಾನಿಸಲಾಗಿದೆ.

ಅದರಂತೆ ರಾಜ್ಯದ ಎಲ್ಲಾ ಆಡಳಿತ ಮಂಡಳಿಗಳ 1 ರಿಂದ 10ನೇ ತರಗತಿಯವರೆಗೆ ದಾಖಲಾಗುವ ವಿದ್ಯಾರ್ಥಿಗಳ ಮಾಹಿತಿಯನ್ನು ಏಕ ರೂಪದಲ್ಲಿ ಸಂಗ್ರಹಿಸಲು ಅವಶ್ಯಕತೆ ಇದ್ದು ಅದರಂತೆ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರವರ ಅನುಮೋದನೆಯಂತೆ ವಿದ್ಯಾರ್ಥಿ ದಾಖಲಾತಿ ಅರ್ಜಿ ನಮೂನೆಯನ್ನು ಸಿದ್ಧಪಡಿಸಿ ಸರ್ಕಾರಿ ಮುದ್ರಣಾಲಯದಲ್ಲಿ ಮುದ್ರಿಸಲಾಗುತ್ತಿದೆ.

ಎಲ್ಲಾ ಉಪನಿರ್ದೇಶಕರುಗಳಿಗೆ 2016-17ನೇ ಸಾಲಿನಲ್ಲಿ ಹೊಸದಾಗಿ ದಾಖಲಾಗುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನೋಂದಣಿ ಅರ್ಜಿಯನ್ನು ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಕನ್ನಡ ಭಾಷೆಯಲ್ಲಿ ಮುದ್ರಿಸಿ ದಿನಾಂಕ: 25-05-2016 ರೊಳಗೆ ಜಿಲ್ಲಾ ಕಛೇರಿಗಳಿಗೆ ಅಗತ್ಯವಿರುವ ನಮೂನೆಗಳನ್ನು ನೀಡಲಾಗುತ್ತದೆ. ಎಲ್ಲಾ ಉಪನಿರ್ದೇಶಕರುಗಳು ದಿನಾಂಕ: 26-05-2016 ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಭೆಯನ್ನು ಆಯೋಜಿಸಿ ದಿನಾಂಕ: 28-05-2016 ರೊಳಗೆ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮುಖ್ಯಸ್ಥರುಗಳಿಗೆ ಕಡ್ಡಾಯವಾಗಿ ತಲುಪಿಸಲು ವ್ಯವಸ್ಥೆಯನ್ನು ಮಾಡುವುದು.

ವಿದ್ಯಾರ್ಥಿ ಅರ್ಜಿ ನಮೂನೆಗಳು ಅಗತ್ಯತೆ ಇದ್ದಲ್ಲಿ www.schooleducation.kar.nic.in ರಲ್ಲಿ ಮತ್ತು www.sts.karnatakaka.gov.in ರಲ್ಲಿ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ನಮೂನೆಗಳು ಲಭ್ಯವಿರುತ್ತದೆ. ತಮ್ಮ ಜಿಲ್ಲೆಯ ಎಲ್ಲಾ ಆಡಳಿತ ಮಂಡಳಿಗಳ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯವರೆಗೆ 2016-17ನೇ ಸಾಲಿನಲ್ಲಿ ಹೊಸದಾಗಿ ದಾಖಲಾಗುವ ವಿದ್ಯಾರ್ಥಿಗಳ ಮಾಹಿತಿಯನ್ನು ಇಲಾಖೆಯಿಂದ ನೀಡಿರುವ ನಮೂನೆಗಳಲ್ಲಿಯೇ ದಾಖಲಾತಿ ಮಾಡಿಕೊಳ್ಳಲು ಕಡ್ಡಾಯವಾಗಿ ಸೂಚಿಸಿದೆ. ದಿನಾಂಕ 30-05-2016 ರಿಂದ 15-06-2016ರೊಳಗೆ

ದಾಖಲಾಗಿರುವ ಎಲ್ಲಾ ವಿದ್ಯಾರ್ಥಿಗಳ ನಮೂನೆಗಳನ್ನು ಸಂಗ್ರಹಿಸಿ ದಿನಾಂಕ:17-06-2016ರೊಳಗೆ ಕ್ಲಸ್ಟರ್/ ಬ್ಲಾಕ್ ಹಂತಕ್ಕೆ ವಿದ್ಯಾರ್ಥಿಗಳ ಮಾಹಿತಿ ನಮೂನೆಗಳನ್ನು ಗಣಕೀಕರಣ ಮಾಡಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವುದು ಇಲಾಖೆಯಿಂದ ದಿನಾಂಕ: 30-05-2016ರಂದು ತಂತ್ರಾಂಶವನ್ನು www.sts.karnatakaka.gov.inನ ವೆಬ್‌ಸೈಟ್‌ನಲ್ಲಿ ಕಲ್ಪಿಸಲಾಗುವುದು.

**ವಿದ್ಯಾರ್ಥಿಗಳ ಮಾಹಿತಿಗಳ ಗಣಕೀರಣ:-** ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಶಾಲೆಗಳ ಮಾಹಿತಿಗಳನ್ನು ಸಿಆರ್‌ಪಿ ರವನ್ನು ಕಡ್ಡಾಯವಾಗಿ ಆನ್ ಲೈನ್ ಮೂಲಕ ದಿನಾಂಕ: 18-06-2016 ರಿಂದ 30-06-2016 ರೊಳಗೆ ಗಣಕೀಕರಣವನ್ನು ಪೂರ್ಣಗೊಳಿಸಿ ವರದಿಯನ್ನು ನೀಡುವುದು ಹಾಗೂ ಎಲ್ಲಾ ಅನುದಾನರಹಿತ ಪ್ರಾಥಮಿಕ ಮತ್ತು ಎಲ್ಲಾ ಆಡಳಿತ ಮಂಡಳಿಗಳ ಪ್ರೌಢ ಶಾಲೆಗಳಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳ ಮಾಹಿತಿಯನ್ನು ಮೇಲೆ ಸೂಚಿಸಿರುವ ತಂತ್ರಾಂಶದಲ್ಲಿ ಗಣಕೀರಣವಾಗಿರುವ ಬಗ್ಗೆ ಮೇಲುಸ್ತುವಾರಿ ನಡೆಸಿ ದಿನಾಂಕ:- 30-06-2016 ರೊಳಗೆ ಎಲ್ಲಾ ಉಪನಿರ್ದೇಶಕರು ತಮ್ಮ ಜಿಲ್ಲೆಯಲ್ಲಿ 2016-17ನೇ ಸಾಲಿನಲ್ಲಿ ಹೊಸದಾಗಿ ದಾಖಲಾಗಿರುವ 1 ರಿಂದ 10ನೇ ತರಗತಿಯಲ್ಲಿ ವಿದ್ಯಾರ್ಥಿಗಳ ಮಾಹಿತಿಯನ್ನು ಆನ್ ಲೈನ್‌ನಲ್ಲಿ ಇಲಾಖೆಯಿಂದ ನೀಡಿರುವ ತಂತ್ರಾಂಶದಲ್ಲಿ ಗಣಕೀಕರಣಗೊಳಿಸಿರುವ ಬಗ್ಗೆ ದೃಢೀಕರಿಸಿಕೊಂಡು ದಿನಾಂಕ: 05-07-2016ರೊಳಗೆ 2016-17ನೇ ಸಾಲಿನ ವಿದ್ಯಾರ್ಥಿ ಮಾಹಿತಿಯನ್ನು ರಾಜ್ಯ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

ಆಯುಕ್ತರು ಮತ್ತು ರಾಜ್ಯ ಯೋಜನಾ ನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆ, ಸಶಿಅ, ರಾಮಾಶಿಅ
ಬೆಂಗಳೂರು.

<u>ಮಾಹಿತಿಗಾಗಿ</u>

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಇಲಾಖೆ , ಬೆಂಗಳೂರು
2. ನಿರ್ದೇಶಕರು , ಪ್ರಾಥಮಿಕ ಶಿಕ್ಷಣ ಮತ್ತು ಪ್ರೌಢ ಶಿಕ್ಷಣ ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ
3. ನಿರ್ದೇಶಕರು (ಕಾರ್ಯಕ್ರಮ) ಸರ್ವಶಿಕ್ಷಣ ಅಭಿಯಾನ ಬೆಂಗಳೂರು. ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ
4. ಕಛೇರಿ ಪ್ರತಿ.